ಮಹನೀಯರುಗಳಿಗೆ ರಾಜ್ಯೋತ್ಸವದ ಪ್ರಶಸ್ತಿ ನೀಡಲು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಶಿಫಾರಸ್ಸು ಮಾಡಲಾಗುವುದು.

ಶ್ರೀ ಕೆ. ಜಯರಾಮ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಅದರ ಮೇಲೆ ಚರ್ಚೆ ಇಲ್ಲ. You can reconsider the Statement. ಅದನ್ನು ರಾಜ್ಯೋತ್ಸವ ಪ್ರಶಸ್ತಿಗೆ ಜಾನಪದ ಕ್ರೀಡೆ ಎಂದು ಹೇಳಿ ಮಾಡುತ್ತಿದ್ದೀರಿ. ಹಾಗೆಯೇ ಅದನ್ನು ಸ್ಪೋರ್ಟ್ಸ್‌ನಲ್ಲಿ ಸೇರಿಸಿ.

2) ಗಡಿನಾಡು ಪ್ರದೇಶಾಭಿವೃದ್ಧಿಗೆ ಸರ್ಕಾರದ ಹಣ

ಶ್ರೀ ಅಲ್ಲಂ ವೀರಭದ್ರಪ್ಪ (ಕುರಗೋಡು) : ಮಾನ್ಯ ಅಧ್ಯಕ್ಷರೇ, ಸರ್ಕಾರವು ಗಡಿನಾಡು ಪ್ರದೇಶಗಳಿಗೆ ಗಡಿನಾಡು ಪ್ರದೇಶಾಭಿವೃದ್ಧಿ ಯೋಜನೆಯಡಿ ಎಷ್ಟು ಹಣವನ್ನು ಒದಗಿಸಿದ್ದೀರಿ? ಈ ತನಕ ನಮ್ಮ ಬಳ್ಳಾರಿ ಜಿಲ್ಲೆಗೆ ಎಷ್ಟು ಹಣವನ್ನು ಒದಗಿಸಿದ್ದೀರೆಂದು ಕೇಳುತ್ತೇನೆ.

ಶ್ರೀ ಸಿದ್ಧರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು) : ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿಯನ್ನು ಕೋರಿ ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ.

ಸರ್ಕಾರವು ಗಡಿ ಪ್ರದೇಶ ಅಭಿವೃದ್ಧಿ ಯೋಜನೆಯಡಿಯಲ್ಲಿ 1990-91ರಿಂದ ಇದುವರೆಗೆ 56.80 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಬಳ್ಳಾರಿ ಜಿಲ್ಲೆಗೆ ಈ ತನಕ 2.58ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಈ ಯೋಜನೆಯಡಿಯಲ್ಲಿ ತಾಲ್ಲೂಕನ್ನು ಒಂದು ಘಟಕವನ್ನಾಗಿ ಪರಿಗಣಿಸಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ. ಕ್ಷೇತ್ರವಾರು ಅನುದಾನವನ್ನು ಬಿಡುಗಡೆ ಮಾಡುತ್ತಿಲ್ಲ ಆದ್ದರಿಂದ ಕುರುಗೋಡು ಕ್ಷೇತ್ರಕ್ಕೆ ಪ್ರತ್ಯೇಕವಾಗಿ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. ಬಳ್ಳಾರಿ ತಾಲ್ಲೂಕಿಗೆ 95.29ಲಕ್ಷ ರೂಪಾಯಿಗಳನ್ನು ಇದುವರೆಗೆ ಬಿಡುಗಡೆ ಮಾಡಲಾಗಿದೆ.

3) ಶಿವಮೊಗ್ಗ ಜಿಲ್ಲಾ ಪಂಚಾಯತಿಯಿಂದ ಮಂಜೂರಾಗಿರುವ ಕಾಮಗಾರಿಗಳು ಕುಂಠಿತಗೊಂಡಿರುವ ಬಗ್ಗೆ

ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯ ಜಿಲ್ಲಾ ಪರಿಷತ್ತಿನಿಂದ ಮಂಜೂರಾಗಿರುವ ರಸ್ತೆ ಕಾಮಗಾರಿಗಳು ಡಾಂಬೀರಿನ ಸರಬರಾಜು ಇಲ್ಲದೆ ಕುಂಠಿತಗೊಂಡಿವೆ ಎಂಬುದು ಸರ್ಕಾರದ ಗಮನದಲ್ಲಿದೆಯೇ? ಈ ಬಗ್ಗೆ ಡಾಂಬರು ಸರಬರಾಜು ಮಾಡುವ ಸಂಸ್ಥೆಗೆ ಹಣ ತುಂಬಿ ಸಾಕಷ್ಟು ಸಮಯವಾದರೂ ವಿಶೇಷವಾಗಿ ಸರಬರಾಜು ವಿಳಂಬವಾಗಿದೆ ಎಂದು ಅಧಿಕಾರಿಗಳು ತಿಳಿಸುತ್ತಿದ್ದಾರೆ. ಮಾರ್ಚ್ ತಿಂಗಳ ಅಂತ್ಯದೊಳಗೆ ಕಾಮಗಾರಿ ಮಾಡಿ ಮುಗಿಸದಿದ್ದಲ್ಲಿ ವಿವಿಧ ಯೋಜನೆಗಳಲ್ಲಿ ಮಂಜೂರಾಗಿರುವ ಹಣ ಲ್ಯಾಪ್ಸ್ ಆಗಿಹೋಗುತ್ತದೆ ಹಾಗೂ ಜನರಿಗೆ ಅಲ್ಲಿ ತೊಂದರೆಯಾಗುತ್ತದೆ. ಇಂತಹ ಮಹತ್ವದ ವಿಷಯದಲ್ಲಿ ಸರ್ಕಾರ ಜರೂರು ಕಾರ್ಯ ಪ್ರವೃತ್ತವಾಗಿ ಡಾಂಬರನ್ನು ಸಾಕಷ್ಟು ಸರಬರಾಜು ಮಾಡಿಸುವ ಬಗ್ಗೆ ಕ್ರಮ ಕೈಗೊಳ್ಳಲು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಶಿವಮೊಗ್ಗ ಜಿಲ್ಲಾ ಪಂಚಾಯತಿ ರಸ್ತೆ ಕಾಮಗಾರಿಗಳ ಸಂಬಂಧಿಸಿದಂತೆ ಅಸ್‌ಫಾಲ್ಟನ್ನು ಇಂಡಿಯನ್‌ಆಯಿಲ್ ಕಾರ್ಪೊರೇಶನ್ ಮದ್ರಾಸ್ ಇವರಿಂದ ಪಡೆಯಬೇಕಾಗುತ್ತದೆ. ಈ ಬಗ್ಗೆ ಈಗಾಗಲೇ ಜಿಲ್ಲಾ ಪಂಚಾಯತಿಯವರು ತಮಗೆ ಅಗತ್ಯವಾಗಿ ಬೇಕಾದ ಅಸ್‌ಫಾಲ್ ಟನ್ನು ಖರೀದಿಸಲು ಇಂಡಿಯನ್ ಆಯಿಲ್ ಕಾರ್ಪೊರೇಶನ್ ಮದ್ರಾಸ್ ಇವರಿಗೆ ತಮ್ಮ ಬೇಡಿಕೆ ಸಲ್ಲಿಸಿ ಹಣ ಮುಂಗಡವಾಗಿ ಪಾವತಿಸಿರುತ್ತಾರೆ. ಇತ್ತೀಚಿನ ಕಾವೇರಿ ನದಿಯ ನೀರಿನ ಚಳುವಳಿ ಮತ್ತು ಇನ್ನಿತರ ಕಾರಣಗಳಿಂದ ಅಸ್‌ಫಾಲ್ಟನ್ನು